ಕಾವೇರಿ ಸ್ನೇ ಹಂತದಿಂದ ಖಾಸಗೀ ಲೇಔಟ್‌ಗಳಿಗೆ ನೀರೊದಗಿಸುವುದು

ಶ್ರೀ (ಡಾ||) ಶ್ರೀ ಎಸ್. ರಮೇಶ್ (ಉತ್ತರಹಳ್ಳಿ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಇತ್ತೀಚೆಗೆ ಖಾಸಗಿ ಲೇಔಟ್‌ಗಳಿಗೆ ಕಾವೇರಿ ಸ್ನೇ ಹಂತದಿಂದ ನೀರೊದಿಗಿಸುವ ಬಗ್ಗೆ ಒಂದು ಎಕರೆ ಜಮೀನಿಗೆ ಒಂದು ಲಕ್ಷ ರೂಪಾಯಿಗಳನ್ನು ವಸೂಲ್ಮಾಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಸದರಿ ಹಣವನ್ನು ಯಾವ ಬಾಬಿಗಾಗಿ ಮತ್ತು ಏಕೆ ವಸೂಲ್ಮಾಡುತ್ತಿದ್ದಾರೆ ?

ಶ್ರೀ ವೀರೇಂದ್ರಪಾಟೀಲ್ (ಮುಖ್ಯ ಮಂತ್ರಿಗಳು).—

ಅ) ಹೌದು.

ಆ) ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಕೈಗೊಂಡಿರುವ ಕಾವೇರಿ ನೀರು ಸರಬರಾಜು ಸ್ನೇ ಹಂತದ ಯೋಜನೆಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ನೀಡಬೇಕಾದ ಭಾಗದ ಬಾಬಿಗಾಗಿ ಈ ಹಣವನ್ನು ವಸೂಲಿ ಮಾಡಲಾಗುತ್ತಿದೆ.

ಶ್ರೀ ಎಸ್. ರಮೇಶ್.—ಮಾನ್ಯ ಉಪಾಧ್ಯಕ್ಷಿಣಿಯವರೆ, ನನ್ನ ಮೊದಲನೆಯ ಪ್ರಶ್ನೆಗೆ ಮಂತ್ರಿಗಳು ''ಹೌದು'' ಎಂದು ಬೆಂಗಳೂರು ಡವಲಪ್‌ಮೆಂಟ್ ಅಥಾರಿಟಿಯವರು ೧ ಲಕ್ಷ ತೆಗೆದುಕೊಳ್ಳುತ್ತಿದ್ದಾರೆಂದು ಉತ್ತರ ಕೊಟ್ಟಿದ್ದಾರೆ. ನನ್ನ ಮನವಿ ಏನೆಂದರೆ ಕಾರ್ಖಾನೆಗಳಲ್ಲಿ ಕೆಲಸ ಮಾಡುತಕ್ಕ ಕಾರ್ಮಿಕರ ಹೌಸಿಂಗ್ ಸೊಸೈಟಿಗಳು ಏನಿವೆ ಅವು ಖಾಸಗಿ ಗೃಹನಿರ್ಮಾಣ ಸಹಕಾರ ಸಂಘಗಳ ತರಹ ಅಲ್ಲ. ಅಲ್ಲಿ ಚುನಾಯಿತ ಪ್ರತಿನಿಧಿಗಳು ಇರುತ್ತಾರೆ. ಆಡಳಿತ ವರ್ಗದ ಪ್ರತಿನಿಧಿಗಳು ಇರುತ್ತಾರೆ. ಕಾರ್ಮಿಕ ವರ್ಗದ ಚುನಾಯಿತ ಪ್ರತಿನಿಧಿಗಳು ಇರುತ್ತಾರೆ. ಅಲ್ಲಿ ಎರಡು ಕಡೆಯವರು ಇರುತ್ತಾರೆ. ಅಂತಹವರು ೧ ಲಕ್ಷ ರೂಪಾಯಿ ಕಟ್ಟಬೇಕೆಂದರೆ ಕಾರ್ಮಿಕರಿಗೆ ತೊಂದರೆಯಾಗುತ್ತದೆ. ಬೆಂಗಳೂರು ನಗರದಲ್ಲಿ ಕಾರ್ಮಿಕರು ಬಹಳ ತೊಂದರೆಯಲ್ಲಿರುತ್ತಾರೆ. ಅಂತಹವರಿಗೆ ನಿಜವಾಗಿಯೂ ಎಕ್ಸ್‌ಮ್ಷನ್ ಕೊಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಟಿ. ಎನ್. ನರಸಿಂಹಮೂರ್ತಿ (ಮುಖ್ಯ ಮಂತ್ರಿಗಳ ಪರವಾಗಿ).—ಮಾನ್ಯ ಉಪಾಧ್ಯಕ್ಷಿಣೀಯವರೆ, ನಿಜವಾದ ಸಹಕಾರ ಸಂಘಗಳು ಯಾವುವು, ನಿಜವಲ್ಲದ ಸಹಕಾರ ಸಂಘಗಳು ಯಾವುವು ಎಂಬುದು ಅರ್ಥವಾಗುತ್ತಿಲ್ಲ. ಇಲ್ಲಿ ಒಂದು ನೀತಿಯನ್ನು ಏನು ಹಾಕಿಕೊಂಡಿದ್ದೇನೆಂದರೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಬೆಂಗಳೂರು ನಗರ ನೀರು ಸರಬರಾಜು ಮಂಡಳಿಗೆ ೩೦ ಕೋಟಿ ರೂಪಾಯಿಗಳನ್ನು ಕೊಡಬೇಕೆಂದು ಸರ್ಕಾರದ ಆದೇಶ ಕೊಟ್ಟ ಮೇರೆಗೆ, ಬಹುಶ: ಈ ಅನಿವಾರ್ಯವಾದ ನೀತಿಯಲ್ಲಿ ಒಂದು ಎಕರೆಗೆ ೧೦ ಸಾವಿರ ರೂಪಾಯಿಗಳನ್ನು ನಿಗದಿ ಮಾಡಿದ್ದೇವೆ ಅದು ಬಹಳ ಸೂಕ್ತವಾಗಿದೆ ಸಕಾಲಿಕವಾಗಿದೆ. ಬೆಂಗಳೂರು ನಗರದಲ್ಲಿ ಯಾವುದೇ ಸೈಟ್ ಇರಬಹುದು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಸೈಟ್ ಆಗಿರಬಹುದು. ಅಥವಾ ಖಾಸಗೀಯಿಂದ ಇರಬಹುದು. ಆ ನಾಗರೀಕರು ಯಾರು ಪ್ರಾಧಿಕಾರದ ಚೌಕಟಿನಲ್ಲಿ ಬರುತ್ತಾರೆ, ಅವರಿಗೆ ನೀರು ಸರಬರಾಜು ಮಾಡುವ ಸದುದ್ದೇಶದಿಂದ ಇವೊತ್ತು ೩೦ ಕೋಟಿ ರೂಪಾಯಿಗಳನ್ನು ನಮ್ಮ ಪ್ರಾಧಿಕಾರದವರು ಮಂಡಳಿಗೆ ಕೊಡಬೇಕಾಗಿರುವುದರಿಂದ, ಈ ಒಂದು ವಿಶೇಷ ವ್ಯವಸ್ಥೆ ಇದೆ.

ಶ್ರೀ ಎಸ್. ರಮೇಶ್.—ಈಗ ಪ್ರಶ್ನೆ ಬಂದಿರತಕ್ಕಂಥಾದ್ದು, ಒಬ್ಬ ಕಾರ್ಮಿಕನಿಗೆ ಹೀಗೆ ಹಣವನ್ನು ಸಂಗ್ರಹಿಸಿ ಕೊಡುವುದಕ್ಕೆ ಆಗುತ್ತದೆಯೆ ಎನ್ನುವುದು ಈಗ ಬಿ. ಇ. ಎಲ್. ಸೊಸೈಟಿ, ಹೆಚ್. ಎ. ಎಲ್ ಸೊಸೈಟಿಗಳಿವೆ ಅವರು ಸೆಲ್ಫ್ ವಾಟರ್ ಸ್ಕೀಮ್ ಮಾಡುತ್ತೇವೆ ಏಂದರೆ ಆಗ ಅವರಿಗೆ ಎಕ್ಸ್‌ಂಪ್ಷನ್ ಕೊಡುತ್ತೀರಾ ? ಈಗ ನಿಜವಾದ ಕಾರ್ಮಿಕರ ಸೊಸೈಟಿಗಳು ಏನಿವೆ, ಬಿ.ಇ.ಎಲ್. ಹೆಚ್.ಎ.ಎಲ್ ಇಂತಹ ಸಂಸ್ಥೆಗಳಿಗೆ ಮತ್ತು ಸರ್ಕಾರಕ್ಕೆ ಸಂಬಂಧಪಟ್ಟ ಎನ್. ಜಿ. ಇ. ಎಫ್. ಕಾರ್ಖಾನೆಯ ಸೊಸೈಟಿ ಇರಬಹುದು; ಇಂಥಾದಕ್ಕೆ ಎಕ್ಸ್‌ಂಪಶನ್ ಕೊಡಬೇಕಾಗುತ್ತದೆ. ಕೊಡದೇ ಇದ್ದರೆ ಅವರು ರಸ್ತೆಗೆ ಬರಬೇಕಾಗುತ್ತದೆ. ಹತ್ತು ಸಾವಿರ ರೂಪಾಯಿ ಎಂದು ತಾವು ಸುಲಭವಾಗಿ ಹೇಳುತ್ತೀರಿ. ಹತ್ತುಹದಿನೈದು ಸಾವಿರ ರೂಪಾಯಿ ಅಂದರೆ ಅವರ ಆರು ತಿಂಗಳ, ವರ್ಷದ ಸಂಬಳವಾಗುತ್ತದೆ. ಅದನ್ನು ಅವರು ಇಲ್ಲಿ ಕೊಟ್ಟರೆ ಅವರ ಹೆಂಡತ್ರಿ,

ಮಕ್ಕಳ ಪೌಷ್ಟಿಕತೆಗೆ ತಣ್ಣೀರು ಬಟ್ಟೆ ಹಾಕ ಬೇಕಾಗುತ್ತದೆ. ಆದ್ದರಿಂದ ಸರ್ಕಾರ ಸ್ವಲ್ಪ ಮುತುವರ್ಜಿ ವಹಿಸಿ ನಿಜವಾದ ಇಂತಹ ಸಂಘಗಳ ಕಾರ್ಮಿಕರಿಗೆ ಸಂಬಂಧಪಟ್ಟಿದ್ದು ಏನಿವೆ, ಅವರಿಗೆ ರಿಯಾಯಿತಿ ಕೊಡಬೇಕೆಂದು ತಮ್ಮಲ್ಲಿ ಮನವಿ ಮಾಡುತ್ತೇನೆ.

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಮಾನ್ಯ ಸದಸ್ಯರ ವಾದವನ್ನು ಒಪ್ಪುವುದಕ್ಕೆ ಬಹಳ ಕಷ್ಟವಾಗುತ್ತದೆ.

ಶಿಕ್ಷಣ ಇಲಾಖೆ (ಎಂ.ಇ.ಜಿ.) ಯವರಿಗೆ ಜಮೀನನ್ನು ಗುತ್ತಿಗೆ ನೀಡಿರುವುದು

೫೧೪ (೯೭೦) ಶ್ರೀ ಎಂ. ಮುನಿಸ್ವಾಮಿ (ಶಾಂತಿನಗರ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಆಲಸೂರು ಸರೋವರದ ಪ್ರದೇಶದಲ್ಲಿ ಬೆಂಗಳೂರು ನಗರ ಪಾಲಿಕೆಯು ರಕ್ಷಣಾ ಇಲಾಖೆಗೆ ಎಂ.ಇ.ಜಿ. ಮತ್ತು ಕೇಂದ್ರ) ಜಮೀನನ್ನು ಕೊಟ್ಟಿರುವುದು ನಿಜವೇ ?

ಆ) ಹಾಗಿದ್ದಲ್ಲಿ, ಗುತ್ತಿಗೆಗೆ ಕೊಟ್ಟಿರುವ ಜಮೀನಿನ ವಿಸ್ತೀರ್ಣ ಹಾಗೂ ಯಾವ ಷರತ್ತು ಮತ್ತು ನಿಬಂಧನೆಗಳ ಮೇಲೆ ಈ ಜಮೀನಿನನ್ನು ಗುತ್ತಿಗೆಗೆ ನೀಡಲಾಗಿದೆ ?

ಇ) ಗುತ್ತಿಗೆಯ ಅವಧಿಯು ಪೂರ್ಣಗೊಂಡಿದೆಯೇ ಅಥವಾ ಇನ್ನೂ ರ ಧಿಯಲ್ಲಿದಿಯೇ ?

ಈ) ಆಲಸೂರು ಸರೋವರದ ಗಿರಿಶಿಖರದ ಮೇಲೆ ಇರುವ ಕೆಂಪೇಗೌಡ ಗೋಪುರ ಮತ್ತು ಗಿರಿಶಿಖರದ ಕೆಳಭಾಗದಲ್ಲಿರುವ ಶತಮಾನಗಳಷ್ಟು ಹಳೆಯದಾದ ಮುನೇಶ್ವರ ದೇವಸ್ಥಾನಕ್ಕೆ ಅನಧಿಕೃತವಾಗಿ ಬೇಲಿಯನ್ನು ಹಾಕಿರುವುದು ಬೆಂಗಳೂರು ಮಹಾನಗರಪಾಲಿಕೆಯ ಗಮನಕ್ಕೆ ಬಂದಿದೆಯೆ ?

ಉ) ಅನಧಿಕೃತವಾಗಿ ಹಾಕಿರುವ ಬೇಲಿಯನ್ನು ಮಿಲಿಟರಿಯವರಿಂದ ತೆಗೆದುಹಾಕಿಸಲು ಬೆಂಗಳೂರು ಮಹಾನಗರ ಪಾಲಿಕೆಯು ಕ್ರಮವೇನು ?

ಶ್ರೀ ವಿರೇಂದ್ರ ಪಾಟೀಲ್ (ಮುಖ್ಯ ಮಂತ್ರಿಗಳು).—

ಅ) ಹೌದು.

ಆ) ೪೨,೬೫೫ ಚದರ ಅಡಿ. ಸುಮಾರು ೬೫ ವರ್ಷಗಳಷ್ಟು ಹಳೆಯದಾದ ಗುತ್ತಿಗೆ ಪತ್ರದ ಪ್ರತಿ ಬೆಂಗಳೂರು ಮಹಾನಗರ ಪಾಲಿಕೆಯ ದಾಖಲೆಗಳಲ್ಲಿ ಸಧ್ಯಕ್ಕೆ ದೊರೆಯುತ್ತಿಲ್ಲ.

ಇ) ಬೆಂಗಳೂರು ಮಹಾನಗರ ಪಾಲಿಕೆಯು ಸದರಿ ಗುತ್ತಿಗೆ ಕರಾರು ಪತ್ರದ ಪ್ರತಿಯನ್ನು ರಕ್ಷಣಾ ಪ್ರಾಧಿಕಾರದವರಿಂದ ಪಡೆಯಲು ಪ್ರಯತ್ನಿಸುತ್ತಿದೆ. ತದನಂತರ ಈ ಬಗ್ಗೆ ಸರಿಯಾದ ಮಾಹಿತಿಯನ್ನು ತಿಳಿಯಲಾಗುತ್ತದೆ.

ಈ) ಹೌದು.

ಉ) ಹಾಕಿರತಕ್ಕ ಬೇಲಿಯನ್ನು ತೆಗೆಯುವಂತೆ ಬೆಂಗಳೂರು ಮಹಾನಗರ ಪಾಲಿಕೆಯು ದಿನಾಂಕ ೯-೧೧-೧೯೮೯ ರಂದು ರಕ್ಷಣಾ ಇಲಾಖೆಗೆ ಪತ್ರವನ್ನು ಬರೆದಿದೆ ಮತ್ತು ರಕ್ಷಣಾ ಪ್ರಾಧಿಕಾರದವರಿಂದ ಪ್ರತಿಕ್ರಿಯೆಯನ್ನು ನಿರೀಕ್ಷಿಸಲಾಗಿದೆ.

ಶ್ರೀ ಎಂ. ಮುನಿಸ್ವಾಮಿ.—ಮಾನ್ಯ ಉಪಾಧ್ಯಕ್ಷರೆಯವರೇ, ನನಗೆ ಒದಗಿಸಿರತಕ್ಕ ಉತ್ತರ ಏನಿದೆ, ಅದು ಸಮಾಜಸವಾಗಿಲ್ಲ ಎಂದು ನಾನು ಭಾವಿಸುತ್ತಾ, ಸನ್ಮಾನ್ಯ ಮಂತ್ರಿಗಳು ಕೊಟ್ಟಿರತಕ್ಕಂಥ ಈ ಉತ್ತರದಲ್ಲಿ ಆಲಸೂರು ಕೆರೆ ಮೇಲೆ ಇರತಕ್ಕಂಥ ಐತಿಹಾಸಿಕವಾದಂಥ ಕೆಂಪೇಗೌಡ ಟವರ್ ಏನಿದೆ, ಮತ್ತು ಅದರ ಕೆಳಮಟ್ಟದಲ್ಲಿರತಕ್ಕಂಥ ಮುನೇಶ್ವರ ದೇವಸ್ಥಾನ ಏನಿದೆ, ಅದು ನೂರಾರು ವರ್ಷಗಳಿಂದ ಸಾರ್ವಜನಿಕರ ಒಂದು ಸ್ಥಳವಾಗಿದ್ದು ಅದನ್ನು ಇತ್ತೀಚೆಗೆ ಮಿಲಿಟರಿ ಅಥಾರಿಟಿ ಏನಿದೆ ಈ ಎಂ.ಇ.ಜಿ. ಹಾಗೂ ಕೇಂದ್ರ-ಅವರು ಇವರಿಗೆ ಅಲ್ಲಿ ಕಾರ್ಪೊರೇಷನ್ ವತಿಯಿಂದ ಸುಮಾರು ೬ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಒಂದು ಕಾಂಪೌಂಡ್ ಕಟ್ಟಿದಮೇಲೆ, ಈ ಮಿಲಿಟರಿ ಅಥಾರಿಟಿಯವರು ಬಂದು ಅದನ್ನು ತಮ್ಮ ಸ್ವಾಧೀನಪಡಿಸಿಕೊಂಡು ದೇವರು ಮತ್ತು ಕೆಂಪೇಗೌಡ